ಶಿಕ್ಷಕರ ಕ್ಷೇತ್ರದ ಮತದಾರರಿಗೆ ಅನುಕೂಲಕ್ಕಾಗಿ ಸಹಾಯವಾಣಿ ಸ್ಥಾಪನೆ

ಉದಯಕಾಲ ನ್ಯೂಸ್

ಬೆಂಗಳೂರು: ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್ತಿನ ಬೆಂಗಳೂರು ಪದವೀಧರರ ಕ್ಷೇತ್ರ ಹಾಗೂ ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಜೂ.3ರಂದು ಮತದಾನ ನಡೆಯಲಿದೆ. ಬೆಂಗಳೂರು ಪದವೀಧರರ ಕ್ಷೇತ್ರದ ವ್ಯಾಪ್ತಿಗೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳು ಹಾಗೂ ಕರ್ನಾಟಕ ಆಕ್ಷೇಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಗೆ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳು ಒಳಪಡುತ್ತವೆ.

ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಮತದಾರರಿಗೆ ಅನುಕೂಲವಾಗುವಂತೆ ಚುನಾವಣಾಧಿಕಾರಿಗಳು ಹಾಗೂ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಕಛೇರಿಯಲ್ಲಿ ಮತ್ತು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳ ಕಛೇರಿಗಳಲ್ಲಿ ಸಹಾಯವಾಣಿಯನ್ನು ಸ್ಥಾಪಿಸಲಾಗಿರುತ್ತದೆ.

ಚುನಾವಣಾಧಿಕಾರಿಗಳ ಕಚೇರಿಯ ಸಹಾಯವಾಣಿ ಸಂ: 080-22109665, ಬೆಂಗಳೂರು ಪದವೀಧರ ಕ್ಷೇತ್ರದ ಜಿಲ್ಲಾಧಿಕಾರಿಗ ಕಚೇರಿ ಸಹಾಯವಾಣಿ ಬೆಂಗಳೂರು ನಗರ ಜಿಲ್ಲೆ-080-22211106, ಬಿಬಿಎಂಪಿ. ಪೂರ್ವ (ಉತ್ತರ) -9480685702, ಬಿ.ಬಿ.ಎಂ.ಪಿ. ದಕ್ಷಿಣ-080-26566362, ಬಿಬಿಎಂಪಿ. ಕೇಂದ್ರ-1950, ಬೆಂಗಳೂರು ಗ್ರಾಮಾಂತರ-080-29002025, ರಾಮನಗರ-080-27275946 ಹಾಗೂ ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ಜಿಲ್ಲಾಧಿಕಾರಿ ಸಹಾಯವಾಣಿ ವಿವರ ದಾವಣಗೆರೆ-1800-4250380, ಚಿತ್ರದುರ್ಗ-08194-1950, ತುಮಕೂರು-08162-273595, ಚಿಕ್ಕಬಳ್ಳಾಪುರ-08156-277071 ಮತ್ತು ಕೋಲಾರ-08152-243507 ಅನ್ನು ಸಂಪರ್ಕಿಸಬಹುದಾಗಿದೆ.

ಚುನಾವಣಾ ನಿಯಮಾವಳಿಗಳ ಅನ್ವಯ ಮತದಾನ ಅಂತ್ಯಗೊಳ್ಳುವ 48 ಗಂಟೆಗಳ ಪೂರ್ವದಲ್ಲಿ ಜೂ.1ರ ಮಧ್ಯಾಹ್ನ 4 ಗಂಟೆಗೆ ಚುನಾವಣಾ ಬಹಿರಂಗ ಪ್ರಚಾರ ಅಂತ್ಯಗೊಳ್ಳಲಿದ್ದು, ನಂತರದಲ್ಲಿ ಯಾವುದೇ ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ಬಹಿರಂಗ ಪ್ರಚಾರ ಕೈಗೊಳ್ಳುವುದನ್ನು ನಿಷೇಧಿಸಿದೆ ಎಂದು ಚುನಾವಣಾಧಿಕಾರಿ ಹಾಗೂ ಪ್ರಾದೇಶಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಗ್ನೇಯ ಶಿಕ್ಷಕರ ಚುನಾವಣೆ : ಸಾರ್ವಜನಿಕ ಸಭೆ ನಿಷೇಧ

ಉದಯಕಾಲ ನ್ಯೂಸ್

ತುಮಕೂರು: ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರ ಚುನಾವಣೆಗೆ ಸಂಬಂಧಿಸಿದಂತೆ ಮತಕ್ಷೇತ್ರ ವ್ಯಾಪ್ತಿಯಲ್ಲಿ ಮತದಾನದ ಮುಕ್ತಾಯಕ್ಕೆ ನಿಗದಿಯಾಗಿರುವ ಗಡುವಿಗೆ 48 ಗಂಟೆ ಮುನ್ನ ಅಂದರೆ ಜೂನ್ 1ರ ಸಂಜೆ 4 ಗಂಟೆ ನಂತರ ಯಾವುದೇ ಕಾನೂನು ಬಾಹಿರ ಸಭೆ/ಸಾರ್ವಜನಿಕ ಸಭೆಗಳನ್ನು ನಡೆಸಬಾರದೆಂದು ಸಹಾಯಕ ಚುನಾವಣಾಧಿಕಾರಿ ಶುಭ ಕಲ್ಯಾಣ್ ಎಲ್ಲಾ ರಾಜಕೀಯ ಪಕ್ಷಗಳು/ಅಭ್ಯರ್ಥಿಗಳಿಗೆ ಸೂಚಿಸಿದ್ದಾರೆ.

ಮತದಾನದ ಮುಕ್ತಾಯಕ್ಕೆ ನಿಗಧಿಯಾಗಿರುವ ಗಡುವಿಗೆ 48 ಗಂಟೆ ಮುನ್ನ ಯಾವುದೇ ಕಾನೂನು ಬಾಹಿರ ಸಭೆ/ಸಾರ್ವಜನಿಕ ಸಭೆಗಳನ್ನು ನಡೆಸುವುದನ್ನು ನಿರ್ಬಂಧಿಸಲಾಗಿದೆ. ನಿರ್ಬಂಧಿತ ಅವಧಿಯಲ್ಲಿ ಸೆಕ್ಷನ್ 144 ಅನ್ವಯ ಮತಕ್ಷೇತ್ರ ವ್ಯಾಪ್ತಿಯಲ್ಲಿ 5ಕ್ಕಿಂತ ಹೆಚ್ಚು ವ್ಯಕ್ತಿಗಳು ಒಟ್ಟುಗೂಡುವಂತಿಲ್ಲ/ ಒಟ್ಟಿಗೆ ಚಲಿಸಲು ಅನುಮತಿ ಇರುವುದಿಲ್ಲ. ಆದರೆ ಅಭ್ಯರ್ಥಿಗಳು ಮನೆ-ಮನೆ ಪ್ರಚಾರಕ್ಕೆ ಭೇಟಿ ನೀಡಲು ನಿರ್ಬಂಧವಿಲ್ಲ ಎಂದು ಅವರು ತಿಳಿಸಿದ್ದಾರೆ.

ನಿರ್ಬಂಧಿತ ಅವಧಿಯಲ್ಲಿ ಚುನಾವಣೆ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ಕ್ಷೇತ್ರದ ಹೊರಗಿನ ವ್ಯಕ್ತಿಗಳು ಮತಕ್ಷೇತ್ರದಲ್ಲಿ ಇರುವುದು ಕಂಡು ಬಂದರೆ ಅವರ ಚಟುವಟಿಕೆಗಳ ಮೇಲೆ ತೀವ್ರ ನಿಗಾವಹಿಸಲಾಗುವುದು. ಮತದಾರರ ಮೇಲೆ ಪ್ರಭಾವ ಬೀರುವ ಯಾವುದೇ ಯತ್ನದಲ್ಲಿ ಭಾಗಿಯಾಗಿರುವುದು ಕಂಡು ಬಂದರೆ ಅವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು. ಈ ಅವಧಿಯಲ್ಲಿ ಯಾವುದೇ ಧ್ವನಿವರ್ಧಕವನ್ನು ಬಳಸಲು ಅನುಮತಿಸಲಾಗುವುದಿಲ್ಲ. ಎಲ್ಲಾ ತರಹದ ಮದ್ಯ ಮಾರಾಟ/ ಸಂಗ್ರಹಣೆಯನ್ನು ನಿಷೇಧಿಸಿ ಒಣದಿನವೆಂದು ಘೋಷಿಸಲಾಗಿದೆ ಎಂದು ಅವರು ಸೂಚಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿಯಲ್ಲಿ ಉಚಿತವಾಗಿ ಪ್ರಯಾಣಕ್ಕೆ ಅವಕಾಶ

ಉದಯಕಾಲ ನ್ಯೂಸ್

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಜೂ.7 ರಿಂದ 14 ರವರೆಗೆ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಪರೀಕ್ಷೆ-2 ನಡೆಯಲಿದ್ದು, ಪರೀಕ್ಷೆಯು ಬೇರೆ ಬೇರೆ ಪರೀಕ್ಷಾ ಕೇಂದ್ರಗಳಲ್ಲಿ ಇರುವುದರಿಂದ ಸಂಸ್ಥೆಯು ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿಟ್ಟುಕೊಂಡು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ದಿನಾಂಕ ಜೂ.7 ರಿಂದ 14 ರವರೆಗೆ ಪರೀಕ್ಷೆಗಳು ನಡೆಯುವ ದಿನಾಂಕಗಳಂದು ಪರೀಕ್ಷೆಗೆ ಹಾಜರಾಗಲು ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರದವರೆಗೆ ಹೋಗುವಾಗ ಮತ್ತು ಹಿಂದಿರುಗುವಾಗ ಸಂಸ್ಥೆಯ ಸಾಮಾನ್ಯ ಸೇವೆಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ, ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

ಉದಯಕಾಲ
UDAYAKALA
Please Contact
Book Your Classifieds Ads
Mob: 9611335416
udayakalaadvt@gmail.com

CHANGE OF NAME

I, **Ramesh V**, Aged about 25 years, S/o. Venkatesh, Ward No. 18, Sridevinagara, Channarayapatna, Hassan - 573 116, do hereby declare that I have changed my name from **Ramesh Joseph** to **Ramesh V** vide affidavit dated 31.05.2024 sworn to before G. Dayananda, Advocate & Notary, Govt. of India, Bengaluru.

ಸಾಲ ವಸೂಲಾತಿ
ನ್ಯಾಯಾಧಿಕರಣ-1, ಬೆಂಗಳೂರು
ಬಿಎಸ್‌ಎನ್‌ಎಲ್ ಬಿಲ್ಡಿಂಗ್, 4ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ ರಸ್ತೆ, ಬೆಂಗಳೂರು-560001
ಒ.ಎ.ನಂ. 5/2020

ಇವರ ನಡುವೆ:
ಪಂಜಾಬ್ ನ್ಯಾಷನಲ್ ಬ್ಯಾಂಕ್, ...ಅರ್ಜಿದಾರರು
ಮತ್ತು :
ಶ್ರೀ ರಘುನಂದನ್ ನೂರಿ ಮತ್ತು ಇತರರು ...ಪ್ರತಿವಾದಿಗಳು

1993ರ ಸಾಲ ವಸೂಲಾತಿ ನ್ಯಾಯಮಂಡಳಿ (ವಿಧಾನ) ನಿಯಮಾವಳಿ ನಿಯಮ 23(viii)ರಡಿ ಪ್ರತಿವಾದಿ ಸಂಖ್ಯೆ 2 ಮತ್ತು 3 ರವರಿಗೆ ಪತ್ರಿಕಾ ಪ್ರಕಟಣೆ ಮೂಲಕ ನೀಡಲಾದ ಸಮನ್ಸ್

ಪ್ರತಿವಾದಿಗಳು :
2) ಶ್ರೀ ಸರವಣ ಕುಮಾರ್ ಚಳ್ಳೂರ್, ಶ್ರೀನಿವಾಸಮೂರ್ತಿ ಅವರ ಮಗ, ನಂ. 1226, ನೆಲ ಮಹಡಿ, 11ನೇ ಅಡ್ಡರಸ್ತೆ, 22ನೇ ಮೇನ್, ಹೆಚ್‌ಎಸ್‌ಆರ್ ಲೇಔಟ್, 1ನೇ ವಲಯ, ಬೆಗಳೂರು-560102.
3) ಶ್ರೀ ಕೆ. ಸೋಮಶೇಖರ್ ರೆಡ್ಡಿ, ಕೆ. ಜಯಚಂದ್ರ ರೆಡ್ಡಿ ಅವರ ಮಗ, ನಂ. 312, ವೈಸರಾಯ್ ಸ್ಟೈಂಡರ್, ಕೈಕೊಂಡನಹಳ್ಳಿ, ಸರ್ಜಾಪುರ ಮುಖ್ಯ ರಸ್ತೆ, ಬೆಂಗಳೂರು - 560035.
ಆದಾಗ್ಯೂ, ಅರ್ಜಿದಾರರು ಸಾಲ ವಸೂಲಾತಿ ಹಾಗೂ ಬ್ಯಾಂಕ್ ದಿವಾಳಿತನ ಕಾಯ್ದೆ 1993 ಇದಕ್ಕೆ ಅನ್ವಯವಾಗುವಂತಹ ಕಲಂ 19ರಡಿ ನಿಮ್ಮ ವಿರುದ್ಧ ಅರ್ಜಿ ಸಲ್ಲಿಸಿ ವಸೂಲಾಗಬೇಕಿರುವ ಮೊತ್ತ ರೂ. 1,20,88,985/- (ರೂಪಾಯಿ ಒಂದು ಕೋಟಿ, ಇಪ್ಪತ್ತು ಲಕ್ಷ ಎಂಬತ್ತೆಂಟು ಸಾವಿರದ ಒಂಭೈನೂರ ಎಂಭತ್ತೈದು ಮಾತ್ರ) ದಿನಾಂಕ: 26-08-2019 ರಂತೆ ಜೊತೆಗೆ ಹಾಲಿ ಮತ್ತು ಮುಂದಿನ ಬಡ್ಡಿ ಮತ್ತು ಇತರೆ ಪರಿಹಾರಗಳ ವಸೂಲಿಗಾಗಿ ಸಲ್ಲಿಸಿರುತ್ತಾರೆ.
ನಿಮಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಅಥವಾ ದಿನಾಂಕ: 26/9/2024 ರಂದು ಬೆಳಿಗ್ಗೆ 10.30 ಗಂಟೆಗೆ ಖುದ್ದಾಗಿ ಆಗಲಿ ಅಥವಾ ವಕೀಲರ ಮೂಲಕವಾಗಲಿ ಅಥವಾ ನಿಮ್ಮಿಂದ ಅಧಿಕಾರ ಪಡೆದ ಏಜೆಂಟರ ಮೂಲಕವಾಗಲಿ ನ್ಯಾಯಾಧಿಕರಣದ ಮುಂದೆ ಹಾಜರಾಗಿ ಯಾಕಾಗಿ ಪರಿಹಾರಗಳನ್ನು ನಿಮ್ಮಿಂದ ಮಂಜೂರು ಮಾಡಬಾರದು ಎಂಬುದಕ್ಕೆ ಸಮಜಾಯಿಷಿ ನೀಡತಕ್ಕದ್ದು.
ನೋಟಿಸ್ ಪಡೆದುಕೊಂಡಾಗ್ಯೂ, ನೀವೇನಾದರೂ ಗೈರು ಹಾಜರಾದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.
ನ್ಯಾಯಾಧಿಕರಣದ ಮೊಹರಿನೊಂದಿಗೆ ನನ್ನ ಕೈಯಾರೆ
ದಿನಾಂಕ: 19ನೇ ಏಪ್ರಿಲ್, 2024 ರಂದು ನೀಡಲ್ಪಟ್ಟಿದೆ.
ಸಹಿ/-ಅಸಿಸ್ಟೆಂಟ್ ರಿಜಿಸ್ಟ್ರಾರ್
(ಸಾಲ ವಸೂಲಾತಿ ನ್ಯಾಯಾಧಿಕರಣ-1, ಬೆಂಗಳೂರು)

ಸಾಲ ವಸೂಲಾತಿ
ನ್ಯಾಯಾಧಿಕರಣ-1, ಬೆಂಗಳೂರು
ಬಿಎಸ್‌ಎನ್‌ಎಲ್ ಬಿಲ್ಡಿಂಗ್, 4ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ ರಸ್ತೆ, ಬೆಂಗಳೂರು-560001
ಒ.ಎ.ನಂ. 3/2020

ಇವರ ನಡುವೆ:
ಪಂಜಾಬ್ ನ್ಯಾಷನಲ್ ಬ್ಯಾಂಕ್, ...ಅರ್ಜಿದಾರರು
ಮತ್ತು :
ಶ್ರೀಮತಿ ಅನಿತಾ ರೆಡ್ಡಿ ದಾಮಲಚೆರುವು ...ಪ್ರತಿವಾದಿಗಳು

1993ರ ಸಾಲ ವಸೂಲಾತಿ ನ್ಯಾಯಮಂಡಳಿ (ವಿಧಾನ) ನಿಯಮಾವಳಿ ನಿಯಮ 23(viii)ರಡಿ ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೀಡಲಾದ ಸಮನ್ಸ್

ಪ್ರತಿವಾದಿಗಳು :
1) ಶ್ರೀಮತಿ ಅನಿತಾ ರೆಡ್ಡಿ ದಾಮಲಚೆರುವು, ಡಿ.ದಾಮೋದರ ರೆಡ್ಡಿ ಅವರ ಮಗಳು
2) ಶ್ರೀ ವಿಷ್ಣುಚರಣ್ ರೆಡ್ಡಿ ಗಂಡಿಕೋಟ, ಬಾಲಕೃಷ್ಣರೆಡ್ಡಿ.ಜಿ, ಅವರ ಮಗ, ಇಬ್ಬರ ವಾಸ: ನಂ. 1266, 11ನೇ ಅಡ್ಡರಸ್ತೆ, 22ನೇ ಮೇನ್, ಹೆಚ್‌ಎಸ್‌ಆರ್ ಲೇಔಟ್, ಸೆಕ್ಟರ್ 1, ಬೆಗಳೂರು-560102.
ಆದಾಗ್ಯೂ, ಅರ್ಜಿದಾರರು ಸಾಲ ವಸೂಲಾತಿ ಹಾಗೂ ಬ್ಯಾಂಕ್ ದಿವಾಳಿತನ ಕಾಯ್ದೆ 1993 ಇದಕ್ಕೆ ಅನ್ವಯವಾಗುವಂತಹ ಕಲಂ 19ರಡಿ ನಿಮ್ಮ ವಿರುದ್ಧ ಅರ್ಜಿ ಸಲ್ಲಿಸಿ ವಸೂಲಾಗಬೇಕಿರುವ ಮೊತ್ತ ರೂ. 60,68,357/- (ರೂಪಾಯಿ ಅರವತ್ತು ಲಕ್ಷ ಅರವತ್ತೆಂಟು ಸಾವಿರದ ಮುನ್ನೂರ ಏಪತ್ತೇಳು ಮಾತ್ರ) ದಿನಾಂಕ: 26-08-2019ರಂತೆ ಜೊತೆಗೆ ಹಾಲಿ ಮತ್ತು ಮುಂದಿನ ಬಡ್ಡಿ ಮತ್ತು ಇತರೆ ಪರಿಹಾರಗಳ ವಸೂಲಿಗಾಗಿ ಸಲ್ಲಿಸಿರುತ್ತಾರೆ.
ನಿಮಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಅಥವಾ ದಿನಾಂಕ: 26/9/2024 ರಂದು ಬೆಳಿಗ್ಗೆ 10.30 ಗಂಟೆಗೆ ಖುದ್ದಾಗಿ ಆಗಲಿ ಅಥವಾ ವಕೀಲರ ಮೂಲಕವಾಗಲಿ ಅಥವಾ ನಿಮ್ಮಿಂದ ಅಧಿಕಾರ ಪಡೆದ ಏಜೆಂಟರ ಮೂಲಕವಾಗಲಿ ನ್ಯಾಯಾಧಿಕರಣದ ಮುಂದೆ ಹಾಜರಾಗಿ ಯಾಕಾಗಿ ಪರಿಹಾರಗಳನ್ನು ನಿಮ್ಮಿಂದ ಮಂಜೂರು ಮಾಡಬಾರದು ಎಂಬುದಕ್ಕೆ ಸಮಜಾಯಿಷಿ ನೀಡತಕ್ಕದ್ದು.
ನೋಟಿಸ್ ಪಡೆದುಕೊಂಡಾಗ್ಯೂ, ನೀವೇನಾದರೂ ಗೈರು ಹಾಜರಾದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.
ನ್ಯಾಯಾಧಿಕರಣದ ಮೊಹರಿನೊಂದಿಗೆ ನನ್ನ ಕೈಯಾರೆ
ದಿನಾಂಕ: 19ನೇ ಏಪ್ರಿಲ್, 2024 ರಂದು ನೀಡಲ್ಪಟ್ಟಿದೆ.
ಸಹಿ/-ಅಸಿಸ್ಟೆಂಟ್ ರಿಜಿಸ್ಟ್ರಾರ್
(ಸಾಲ ವಸೂಲಾತಿ ನ್ಯಾಯಾಧಿಕರಣ-1, ಬೆಂಗಳೂರು)

ಸಾಲ ವಸೂಲಾತಿ
ನ್ಯಾಯಾಧಿಕರಣ-1, ಬೆಂಗಳೂರು
ಬಿಎಸ್‌ಎನ್‌ಎಲ್ ಬಿಲ್ಡಿಂಗ್, 4ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ ರಸ್ತೆ, ಬೆಂಗಳೂರು-560001
ಒ.ಎ.ನಂ. 4/2020

ಇವರ ನಡುವೆ:
ಪಂಜಾಬ್ ನ್ಯಾಷನಲ್ ಬ್ಯಾಂಕ್, ...ಅರ್ಜಿದಾರರು
ಮತ್ತು :
ಶ್ರೀಮತಿ ನೂರಿ ಉಷಾ ರಾಣಿ ಮತ್ತು ಇತರರು ...ಪ್ರತಿವಾದಿಗಳು

1993ರ ಸಾಲ ವಸೂಲಾತಿ ನ್ಯಾಯಮಂಡಳಿ (ವಿಧಾನ) ನಿಯಮಾವಳಿ ನಿಯಮ 23(viii) ರಡಿ ಪ್ರತಿವಾದಿ ಸಂಖ್ಯೆ 2ರವರಿಗೆ ಪತ್ರಿಕಾ ಪ್ರಕಟಣೆ ಮೂಲಕ ನೀಡಲಾದ ಸಮನ್ಸ್

ಪ್ರತಿವಾದಿ ಸಂಖ್ಯೆ 2 :
ಶ್ರೀ. ಕೆ. ಸೋಮಶೇಖರ್ ರೆಡ್ಡಿ, ಕೆ. ಜಯಚಂದ್ರ ರೆಡ್ಡಿ ಅವರ ಮಗ, ನಂ. 312, ವೈಸರಾಯ್ ಸ್ಟೈಂಡರ್, ಬಾಚಾ ತೋರೂಂ ಹಿಂಭಾಗ, ಕೈಕೊಂಡನಹಳ್ಳಿ, ಸರ್ಜಾಪುರ ಮುಖ್ಯ ರಸ್ತೆ, ಬೆಂಗಳೂರು - 560035.
ಆದಾಗ್ಯೂ, ಅರ್ಜಿದಾರರು ಸಾಲ ವಸೂಲಾತಿ ಹಾಗೂ ಬ್ಯಾಂಕ್ ದಿವಾಳಿತನ ಕಾಯ್ದೆ 1993 ಇದಕ್ಕೆ ಅನ್ವಯವಾಗುವಂತಹ ಕಲಂ 19ರಡಿ ನಿಮ್ಮ ವಿರುದ್ಧ ಅರ್ಜಿ ಸಲ್ಲಿಸಿ ವಸೂಲಾಗಬೇಕಿರುವ ಮೊತ್ತ ರೂ. 59,12,889/- (ರೂಪಾಯಿ ಐವತ್ತೊಂಭತ್ತು ಲಕ್ಷ ಹನ್ನೆರಡು ಸಾವಿರದ ಎಂಟು ನೂರ ಎಂಭತ್ತೊಂಭತ್ತು ಮಾತ್ರ) ದಿನಾಂಕ: 26-08-2019 ರಂತೆ ಜೊತೆಗೆ ಹಾಲಿ ಮತ್ತು ಮುಂದಿನ ಬಡ್ಡಿ ಮತ್ತು ಇತರೆ ಪರಿಹಾರಗಳ ವಸೂಲಿಗಾಗಿ ಸಲ್ಲಿಸಿರುತ್ತಾರೆ.
ನಿಮಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಅಥವಾ ದಿನಾಂಕ: 26/9/2024 ರಂದು ಬೆಳಿಗ್ಗೆ 10.30 ಗಂಟೆಗೆ ಖುದ್ದಾಗಿ ಆಗಲಿ ಅಥವಾ ವಕೀಲರ ಮೂಲಕವಾಗಲಿ ಅಥವಾ ನಿಮ್ಮಿಂದ ಅಧಿಕಾರ ಪಡೆದ ಏಜೆಂಟರ ಮೂಲಕವಾಗಲಿ ನ್ಯಾಯಾಧಿಕರಣದ ಮುಂದೆ ಹಾಜರಾಗಿ ಯಾಕಾಗಿ ಪರಿಹಾರಗಳನ್ನು ನಿಮ್ಮಿಂದ ಮಂಜೂರು ಮಾಡಬಾರದು ಎಂಬುದಕ್ಕೆ ಸಮಜಾಯಿಷಿ ನೀಡತಕ್ಕದ್ದು.
ನೋಟಿಸ್ ಪಡೆದುಕೊಂಡಾಗ್ಯೂ, ನೀವೇನಾದರೂ ಗೈರು ಹಾಜರಾದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.
ನ್ಯಾಯಾಧಿಕರಣದ ಮೊಹರಿನೊಂದಿಗೆ ನನ್ನ ಕೈಯಾರೆ
ದಿನಾಂಕ: 19ನೇ ಏಪ್ರಿಲ್, 2024 ರಂದು ನೀಡಲ್ಪಟ್ಟಿದೆ.
ಸಹಿ/-ಅಸಿಸ್ಟೆಂಟ್ ರಿಜಿಸ್ಟ್ರಾರ್
(ಸಾಲ ವಸೂಲಾತಿ ನ್ಯಾಯಾಧಿಕರಣ-1, ಬೆಂಗಳೂರು)

ಮೊದಲ ಬಾರಿಗೆ 12 ಕಾರು ಸೇಲ್ ಮಾಡಿದ ಆರ್‌ಎನ್‌ಎಸ್ ಮೋಟಾರ್ಸ್

ಉದಯಕಾಲ ನ್ಯೂಸ್

ಬೆಂಗಳೂರು: ದೇಶದ ಮುಂಚೂಣಿ ಕಾರು ತಯಾರಕ ಕಂಪನಿ ಮಾರುತಿ ಸುಜುಕಿ, ದೇಶದ ಆಟೋಮೊಬೈಲ್ ಕ್ಷೇತ್ರದಲ್ಲಿ ಐವತ್ತು ಪ್ರತಿಶತ ಮಾರುಕಟ್ಟೆ ಮೌಲ್ಯವನ್ನು ಹೊಂದಿದೆ. ಇನ್ನು ಮಾರುತಿ ಸುಜುಕಿ ಕಾರುಗಳ ಸೇಲ್ಸ್ ಅಂಡ್ ಸರ್ವಿಸ್‌ನಲ್ಲಿ ಮುಂಚೂಣಿಯಲ್ಲಿರುವ ಡೀಲರ್ ಎಂದರೆ ಆರ್‌ಎನ್‌ಎಸ್ ಮೋಟಾರ್ಸ್ ಆಗಿದೆ.

ಆರ್‌ಎನ್‌ಎಸ್ ಶೋರೂಮ್ ಸಿಜಿಎಮ್ ರಾದ ಅರ್ಚನ ಅವರು, ಉಣಕಲ್, ಹುಬ್ಬಳ್ಳಿ ಈಗಾಗಲೇ ಮಾರುತಿ ಸುಜುಕಿ ಕಂಪನಿಯ ಹಲವು ಕಾರುಗಳು ಅತ್ಯುತ್ತಮವಾಗಿ ಮಾರಾಟವಾಗುತ್ತಿದ್ದು, ಗ್ರಾಹಕರ ವಿಸ್ವಾಸಾರ್ಹ ಪಾತ್ರವಾಗಿದೆ. ಆರ್‌ಎನ್‌ಎಸ್ ಮೋಟಾರ್ ಶೋ ರೂಂನಲ್ಲಿ ಒಂದೇ ಬಾರಿ 12

ಕಾರುಗಳನ್ನು ಗ್ರಾಹಕರಿಗೆ ಡೆಲಿವರಿ ನೀಡುವ ಮೂಲಕ ಹೊಸ ಮೈಲುಗಲ್ಲು ಸಾಧಿಸಿದ್ದು, ಕಾರು ತಯಾರಕ ಮಾರುಕಟ್ಟೆಯಲ್ಲಿ ತನ್ನದೇ ಆದಂತಹ ಛಾಪು ಹಾಗೂ ಪಾರುಪತ್ಯ ಮೆರೆಯುತ್ತಿದೆ ಎಂದರೆ ತಪ್ಪಾಗಲಾರದು ಎಂದು ಅವರು ಹೇಳಿದರು.

ವಿಶೇಷವಾಗಿ ಹೊಸ ತಂತ್ರಜ್ಞಾನ ಅಳವಡಿಸಿ ನವೀನ ವಿನ್ಯಾಸ, ಅತೀ ಹೆಚ್ಚು ಮೈಲೇಜ್ ಕೊಡುವುದರಿಂದ ಮಾರ್ಕೆಟ್‌ನಲ್ಲಿ ಸ್ವಿಫ್ಟ್ ಕಾರು ತನ್ನದೆಯಾದ ವಿಶಿಷ್ಟತೆಯಿಂದ ಗ್ರಾಹಕರ ಮನ ಸೆಳೆದಿದೆ. ಶುಕ್ರವಾರ ನಮ್ಮ ಶೋ ರೂಂನಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿದೆ, ಯಾಕೆಂದರೆ ಒಂದೇ ಬಾರಿಗೆ 42ಕ್ಕೂ ಹೆಚ್ಚು ಕಾರುಗಳನ್ನು ಗ್ರಾಹಕರಿಗೆ ಡೆಲಿವರಿ ನೀಡುವ ಮೂಲಕ ಹೊಸ ದಾಖಲೆ ಮಾಡಿದ್ದೇವೆ ಎಂದು ತಮ್ಮ ಸಂತಸ ಹಂಚಿಕೊಂಡರು.

ಈ ಕುರಿತು ಮಾತನಾಡಿದ ಗ್ರಾಹಕರೊಬ್ಬರು, ನನ್ನ ಬಹುದಿನಗಳ ಕನಸನ್ನು ಆರ್‌ಎನ್‌ಎಸ್ ಮೋಟಾರ್ ಸಂಸ್ಥೆ ನನಸಾಗಿಸಿದೆ. ಈ ಶೋ ರೂಂನಲ್ಲಿ ಗ್ರಾಹಕ ಸ್ನೇಹಿ ವಾತಾವರಣವಿದ್ದು, ಪ್ರತಿಯೊಬ್ಬರೂ ನಮಗೆ ಸ್ಪಂದಿಸಿ, ಕಾರು ಡೆಲಿವರಿ ನೀಡಿದ್ದಾರೆ. ಒಂದೇ ಬಾರಿಗೆ ಅಷ್ಟೊಂದು ಕಾರುಗಳನ್ನು ಗ್ರಾಹಕರಿಗೆ ಡೆಲಿವರಿ ನೀಡಿರುವ